# ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 01 ಟಿಎಫ್‌ಪಿ 2023

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ
ಬೆಂಗಳೂರು, ದಿನಾಂಕ:09-02-2023

## ಸುತ್ತೋಲೆ

**ವಿಷಯ:-** ಹಿಂದಿನ ವರ್ಷದ / ವರ್ಷಗಳ ವೇತನ ಬಾಕಿಯನ್ನು ಸೆಳೆಯಲು ಆರ್ಥಿಕ ಇಲಾಖೆಯ ಸಹಮತಿ ಪಡೆಯುವ ಬಗ್ಗೆ.

********

ಸುತ್ತೋಲೆ ಸಂಖ್ಯೆ:ಆಇ 1 ಟಿಎಫ್‌ಪಿ 2021 ದಿ:3.8.2021ರಲ್ಲಿ ಎಲ್ಲಾ ಇಲಾಖೆಗಳು ವೇತನಕ್ಕೆ ಸಂಬಂಧಿಸಿದಂತೆ ಬಾಕಿಗಳನ್ನು ಸೆಳೆಯಬೇಕಾದಲ್ಲಿ ಆರ್ಥಿಕ ಇಲಾಖೆಯ ನಿರ್ದಿಷ್ಟ ಅನುಮೋದನೆ ಪಡೆಯತಕ್ಕದ್ದೆಂದು ತಿಳಿಸಲಾಗಿದೆ.

ಆದರೆ, ಬಾಕಿ ವೇತನದ ಹೊಣೆಗಾರಿಕೆಯು ಮುಂದಿನ ವರ್ಷಕ್ಕೆ ಮುಂದೂಡುವುದನ್ನು ತಪ್ಪಿಸಲು, ಒಂದು ಬಾರಿ ಕ್ರಮವಾಗಿ 2022-23ನೇ ಸಾಲಿನಲ್ಲಿ ವೇತನಕ್ಕಾಗಿ ಒದಗಿಸಿದ ಅನುದಾನದಲ್ಲಿ ಈ ವರ್ಷದ ವೇತನವನ್ನು ಸೆಳೆಯಲು ಕೊರತೆಯಾಗದಂತೆ ಹಿಂದಿನ ಸಾಲಿನ ವೇತನ ಬಾಕಿಯನ್ನು ಸೆಳೆಯಲು ಅನುದಾನ ಲಭ್ಯವಿದ್ದಲ್ಲಿ ಅಂತಹ ಬಾಕಿ ವೇತನಗಳನ್ನು ಆರ್ಥಿಕ ಇಲಾಖೆಯ ಸಹಮತಿ ಇದೆಯೆಂದು ಭಾವಿಸಿ, ಸೆಳೆಯಲು ತಿಳಿಸಲಾಗಿದೆ.

ಸಂಬಂಧಪಟ್ಟ ಖಜಾನೆಗಳು ಇಂತಹ ಬಿಲ್ಲುಗಳನ್ನು ಅಂಗೀಕರಿಸುವಂತೆ ತಿಳಿಸಲಾಗಿದೆ.

Signed by Shobha Ha
Date: 09-02-2023 21:22:35
(ಹೆಚ್.ಎ. ಶೋಭ)
ಸರ್ಕಾರದ ಜಂಟಿ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಎಫ್‌ಆರ್ & ಬಿಸಿಸಿ)

ಪ್ರತಿಗಳು:

1. ಪ್ರಧಾನ ಮಹಾಲೇಖಪಾಲರು,(ಎ&ಇ)/ ಪ್ರಧಾನ ಮಹಾಲೇಖಪಾಲರು(ಸಿ&ಸಿಎ),/ ಮಹಾಲೇಖಪಾಲರು (ಆಡಿಟ್-I & II),ಬೆಂಗಳೂರು.
2. ಆಯುಕ್ತರು, ಖಜಾನೆ ಆಯುಕ್ತಾಲಯ, 6ನೇ ಮಹಡಿ, ಕೆ.ಪಿ.ಸಿ.ಎಲ್. ಗ್ರೀನ್ ಬಿಲ್ಡಿಂಗ್, ಔಷಧ ನಿಯಂತ್ರಣ ಕಛೇರಿ ಕಟ್ಟಡದ ಆವರಣ, ಅರಮನೆ ರಸ್ತೆ, ಬೆಂಗಳೂರು-560 001.
3. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
4. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
5. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
6. ಆರ್ಥಿಕ ಇಲಾಖೆಯ ಅಪರ/ಜಂಟಿ/ಉಪ ಕಾರ್ಯದರ್ಶಿಗಳು
7. ಶಾಖಾ ರಕ್ಷಾ ಕಡತ

ಈ ಸುತ್ತೋಲೆಯನ್ನು ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಧಿಕೃತ ಅಂತರ್ಜಾಲ ತಾಣ www.finance.karnataka.gov.in ನಲ್ಲಿ ವೀಕ್ಷಿಸಿ

Kiran Raghupathi